30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ4628/2019 ಫ್ರಾಸಾ-1 ಚಾಸಾ-1

| | |
|---|---|
| ಸಾಕ್ಷಿಯ ಹೆಸರು | ಶ್ರೀ ಸಂಜೀವ್ ಕುಮಾರ್ ಮಹಾಜನ್ |
| ತಂದೆಯ/ಗಂಡನ ಹೆಸರು | ಜಂಬು ಮಹಾಜನ್ |
| ವಯಸ್ಸು | 50 ವರ್ಷ |
| ಉದ್ಯೋಗ | ಪಿ ಐ, ಸಿಐಡಿ, ಅರಣ್ಯ ಸಂಚಾರಿ ದಳ ಘಟಕ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ19-10-2022 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದ.

ನಾನು ಮೇ 2015 ರಿಂದ ಜೂನ್ 2017 ರವರೆಗೆ ಜೆ ಪಿ ನಗರ ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ30-7-2016 ರಂದು ನಮ್ಮ ಠಾಣಾ ಗುನ್ನೆ ನಂಬರ್ 389/2016 ರಲ್ಲಿ ಸ್ಥಳ ಮತ್ತು ಆರೋಪಿಯ ಮಾಹಿತಿ ಸಂಗ್ರಹಣೆಗಾಗಿ ದಿಃ31-7-2016 ರಂದು ರಾತ್ರಿ ಇಲಾಖಾ ವಾಹನ ಸಂಖ್ಯೆ ಕೆಎ-02-ಜಿ-501 ರಲ್ಲಿ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸಾ-2 ಮತ್ತು ಚಾಸಾ-3 ಇವರುಗಳ ಜೊತೆಗೆ ಹೋಗಿ ಮಾಹಿತಿ ಸಂಗ್ರಹಿಸಿ ವಾಪಸ್ಸು ಠಾಣೆಗೆ ಬರುತ್ತಿದ್ದೆವು. ನಮ್ಮ ಠಾಣಾ ಸರಹದ್ದಿನ 6 ನೇ ಹಂತ, 15 ನೇ ಕ್ರಾಸ್, ಸಿಂಧೂರ ಕಲ್ಯಾಣ ಮಂಟಪದ ಎದುರಿನ ರಸ್ತೆಯಲ್ಲಿ ರಾತ್ರಿ 1-00 ಗಂಟೆಯ ಸಮಯದಲ್ಲಿ ಒಬ್ಬ ವ್ಯಕ್ತಿಯು ಟೀ ಮಾರುತ್ತಿದ್ದನು. ಅಲ್ಲಿ ಸುಮಾರು ಜನರು ಟೀ ಕುಡಿಯಲು ಸೇರಿದ್ದರು.

ರಾತ್ರಿ ವೇಳೆಯಲ್ಲಿ ಅಪರಾಧ ಆಗುವುದನ್ನು ತಪ್ಪಿಸುವುದಕ್ಕಾಗಿ ಅಲ್ಲಿಯ ಜನರನ್ನು ಚದುರಿಸಲಾಯಿತು. ಆ ಜನರಲ್ಲಿ ಒಬ್ಬನಿಗೂ ಸಹ ಹೋಗುವಂತೆ ನಾನು ಸೂಚಿಸಿದನು. ಆ ವ್ಯಕ್ತಿ ಅಲ್ಲಿಂದ ಕದಲದೇ ತನ್ನ ಪ್ಯಾಂಟ್ ಜಿಪ್ ತೆಗೆದು, ನನ್ನ ಸಾಟ ಕಿತ್ತುಕೊಳ್ಳುತ್ತೀಯಾ ಎಂದು, ನೀನು ಯಾರು ನಮ್ಮನ್ನು ಕೇಳಲು ಬೋಳಿ ಮಗನೇ, ಸೂಳೆ ಮಗನೇ ಅಂತ ಬೈದನು. ಹೀಗೆ ಬೈಯ್ಯುವುದನ್ನು ಮುಂದುವರಿಸಿದಾಗ ನಾನು ಜೀಪಿನಿಂದ ಕೆಳಗಿಳಿಯಲು ಪ್ರಯತ್ನಿಸಿದನು. ಆ ವೇಳೆಯಲ್ಲಿ ಆ ಆಸಾಮಿಯು ತನ್ನ ಎಡಗಾಲಿನ ಚಪ್ಪಲಿಯಿಂದ ನನ್ನ ಕಡೆಗೆ ಎಸೆದನು. ಅದು ನನ್ನ ಎಡಭುಜಕ್ಕೆ ತಾಗೀತು. ಆ ಆಸಾಮಿಯು ನನ್ನ ಸಮವಸ್ತ್ರವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದು, ನಾನು ಬಿಡಿಸಲು ಪ್ರಯತ್ನಿಸಿದರು ಆ ಆಸಾಮಿಯು ಬಿಡಲಿಲ್ಲ.

ಚಾಸಾ-2 ಮತ್ತು ಚಾಸಾ-3 ಇವರುಗಳು ವಾಕೀ ಟಾಕೀ ಮೂಲಕ ಅದೇ ಬೀಟ್ ನಲ್ಲಿ ಗಸ್ತು ಮಾಡುತ್ತಿದ್ದ ಚಾಸಾ-4 ಮತ್ತು ಚಾಸಾ-5 ಇವರುಗಳನ್ನು ಸ್ಥಳಕ್ಕೆ ಕರೆಯಿಸಿದರು. ಸ್ಥಳದಲ್ಲಿ ಟೀ ಕುಡಿಯಲು ಇದ್ದ ಭಾರ್ಗವ್, ಲಿಖಿತ್ , ಮೋಹಿತ್ ಮತ್ತು ಸೂಸಿ ಇವರು ಆಸಾಮಿಯಿಂದ ನನ್ನನ್ನು ಬಿಡಿಸಿದರು. ಆಸಾಮಿಯು ಮದ್ಯ ಸೇವನೆ ಮಾಡಿದ ವಾಸನೆ ಬರುತ್ತಿತ್ತು. ತಕ್ಷಣ ಮೇಲೆ ಹೇಳಿದ ಸಿಬ್ಬಂದಿಯಿಂದ ಆ ಆಸಾಮಿಯನ್ನು ಠಾಣೆಗೆ ಕರೆದುಕೊಂಡು ಬಂದೆವು. ಈ ಬಗ್ಗೆ ನಾನು ದೂರು ಕೊಟ್ಟಿರುತ್ತೇನೆ. ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸುತ್ತೇನೆ.

ನನಗೆ ಎಸೆದ ಚಪ್ಪಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಚಪ್ಪಲಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಆ ಆಸಾಮಿಯ ಹೆಸರು ಸ್ಥಳದಲ್ಲಿ ಕುಮಾರ್ ಅಂತ ಹೇಳಿದನು. ಠಾಣೆಗೆ ಕರೆದುಕೊಂಡು ಬಂದು ವಿಚಾರಿಸಿದಾಗ ಆತನ ಹೆಸರು ಶಾಂತ ಕುಮಾರ್ ಅಲಿಯಾಸ್ ಕುಮಾರ್ ಅಂತ ತಿಳಿಯಿತು. ಆತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಶಾಂತಕುಮಾರ್ ಎಂದು ಗುರುತಿಸಿರುತ್ತಾರೆ. ಮಾರನೇ ದಿನ ಚಂದ್ರು ಮತ್ತು ಸಿದ್ಧ ಇವರುಗಳ ಸಮ್ಮುಖದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ತನಿಖಾಧಿಕಾರಿಯು ಮಹಜರ್ ಮಾಡಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ವಾಗಿ ಯಾರು ಪ್ರತಿನಿಧಿಸದೇ ಇರುವುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿನಯ್ ಕುಮಾರ್{(2015)3 ಎಸ್ ಸಿ ಸಿ 220} ಪ್ರಕರಣದಲ್ಲಿ ನೀಡಿದ ತೀರ್ಪಿನ ಅನ್ವಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.